# ಸಾವಿರಾರು ಜನರಿಗೆ ಉದ್ಯೋಗ..

## ಒಂದು ಮಹತ್ವಾಕಾಂಕ್ಷೆಯ ಯೋಜನೆ

ವಿವೇಕಾನಂದ ಹಸೆಲ್–ಫ್ರೀ ಉದ್ಯೋಗ್ (Vivekananda Haselfrë Udyog) ಎನ್ನುವುದು ಹಸೆಲ್‌ಫ್ರೀ ಸಲುಷನ್ಸ್ (ಪ್ರೈವೇಟ್) ಲಿಮಿಟೆಡ್ (Haselfre Solutions (P) Ltd.) ಎಂಬ ಸಂಸ್ಥೆಯು ರಾಮಕೃಷ್ಣ ಮಿಷನ್ನಿನ ಸಹಯೋಗದಿಂದ ಹಮ್ಮಿಕೊಂಡಿರುವ ಒಂದು ಮಹತ್ವಾಕಾಂಕ್ಷೆಯ ಯೋಜನೆ. ಇದರ ಉದ್ದೇಶ, ಸಾವಿರಾರು ನಿರುದ್ಯೋಗಿ ಯುವಕ/ಯುವತಿಯರಿಗೆ ಖಚಿತವಾಗಿ ಉದ್ಯೋಗವನ್ನು ದೊರಕಿಸಿಕೊಡುವುದು ಮತ್ತು ಅದಕ್ಕೆ ಪೂರ್ವಭಾವಿಯಾಗಿ ಅವರ ವ್ಯಕ್ತಿತ್ವ ವಿಕಸನಕ್ಕಾಗಿ ಮತ್ತು ಉದ್ಯೋಗ ಕೌಶಲಗಳನ್ನು ಕಲಿಸಿಕೊಡಲು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

ಈ ಯೋಜನೆಯಲ್ಲಿ ಮುಖ್ಯವಾಗಿ ಪಿ.ಯು.ಸಿ.ಗಿಂತ ಮುಂದೆ ಓದಲು ಸಾಧ್ಯವಾಗದೆ ಇರುವವರನ್ನೇ ಸೇರಿಸಿಕೊಳ್ಳಲಾಗುವುದು. ಅಂಥವರು 18 ವರ್ಷದಿಂದ 40 ವರ್ಷ ವಯಸ್ಸಿನವರಾಗಿರಬೇಕು. ಈ ವಯಸ್ಸಿನವರು ಉದ್ಯೋಗವನ್ನು ಕೈಗೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಇವರಿಗೆ ಸದ್ಯ ನಿಯಮಿತವಾದ ವರಮಾನ ಇರಬಾರದು.

ಈಗಾಗಲೇ ಅಂತಹ 72 ಅಭ್ಯರ್ಥಿಗಳ ಮೊದಲನೆಯ ತಂಡದ ತರಬೇತಿ ಕಾರ್ಯಕ್ರಮವನ್ನು, ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಅಂಗಸಂಸ್ಥೆಯಾದ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ (RIMSE) 2011ರ ಮಾರ್ಚ್ 14ರಂದು ಆರಂಭಿಸಲಾಗಿದೆ. ಮೂರು ತಿಂಗಳ ಈ ತರಬೇತಿ ಶಿಬಿರದಲ್ಲಿ, ಅಭ್ಯರ್ಥಿಗಳು ಹೊಟೆಲ್ ಉದ್ಯಮದ ತರಬೇತಿಯನ್ನು ಪಡೆದುಕೊಂಡು, ಅನಂತರ ಖಚಿತವಾಗಿ ಉದ್ಯೋಗವನ್ನು ಪಡೆಯುತ್ತಾರೆ. ಈಗಾಗಲೇ ಅನೇಕ ಕಂಪನಿಗಳು ಈ ಕಾರ್ಯಕ್ರಮದ ಮಹತ್ವವನ್ನು ಗುರುತಿಸಿವೆ. ಅಲ್ಲದೆ, ಇದರಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳಿಗೆ ತಮ್ಮ ಉದ್ಯೋಗಗಳಲ್ಲಿ ಖಚಿತವಾದ ಇಂಟರ್ನ್‌ಶಿಪ್ ಮತ್ತು ಉದ್ಯೋಗವನ್ನು ಕೊಡಲು ಮುಂದೆ ಬಂದಿವೆ.



ಹಸೆಲ್‌ಫ್ರೀ ಸಲುಷನ್ಸ್ ಸಂಸ್ಥೆ ತನ್ನ ತರಬೇತಿ ಕಾರ್ಯಕ್ರಮಗಳಲ್ಲಿ ವಿಡಿಯೋ ಚಿತ್ರಗಳ, ಮತ್ತು ಕಂಪ್ಯೂಟರ್ ಗೇಮಿಂಗ್ ಮುಂತಾದ ಅತ್ಯಾಧುನಿಕ ತಾಂತ್ರಿಕ ಸಾಧನಗಳನ್ನು ಅಳವಡಿಸಿಕೊಂಡಿದೆ (ಚಿತ್ರ ನೋಡಿ) ಇದರಿಂದಾಗಿ ಯಾವ ಕೌಶಲವನ್ನೂ ಹೊಂದಿರದ ಯುವಕ/ಯವತಿಯರಿಗೂ ಕೂಡ ಕೌಶಲಗಳನ್ನು ಕಲಿಸಿಕೊಡಲು ಮತ್ತು ಆ ಮೂಲಕ ಖಾತರಿ ಉದ್ಯೋಗವನ್ನು ದೊರಕಿಸಿಕೊಡಲು ಸಾಧ್ಯವಾಗುತ್ತದೆ. Karnataka Vocational Training and Skill Development Corporation (KVTSDC) ಸಂಸ್ಥೆಯವರು ಕರ್ನಾಟಕದಲ್ಲಿ ಒಂದು ಲಕ್ಷ ಯುವಕರಿಗೆ ಈ ವಿಧಾನದಲ್ಲಿ ತರಬೇತಿ ನೀಡಲು ಹಸೆಲ್‌ಫ್ರೀ ಸಲುಷನ್ಸ್ (ಪ್ರೈವೇಟ್) ಸಂಸ್ಥೆಗೆ ಅನುಮತಿ ನೀಡಿದ್ದಾರೆ. ಈ ಪ್ರಕಾರ ಹಸೆಲ್‌ಫ್ರೀ ಸಲುಷನ್ಸ್ ಕಂಪನಿಯವರು, ರಾಮಕೃಷ್ಣ ಮಿಷನ್ನಿನ ಸಹಕಾರದೊಂದಿಗೆ ರಾಜ್ಯದ ವಿವಿಧ ಕಡೆಗಳಲ್ಲಿ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಮುಂದಾಗಿದ್ದಾರೆ. ಇದನ್ನು ಸ್ವಾಮಿ ವಿವೇಕಾನಂದರ ೧೫೦ನೇ ಜಯಂತಿ ಮಹೋತ್ಸವದ ಅಂಗವಾಗಿ ನಡೆಸಲಾಗುತ್ತದೆ. ಮುಂದಿನ ಕೇಂದ್ರವನ್ನು ಮಂಗಳೂರಿನಲ್ಲಿ ಶೀಘ್ರವೇ ತೆರೆಯಲಾಗುವುದು.

ಡಾ. ನಡದೂರ್ ಜನಾರ್ದನ ಅವರು ಹಸೆಲ್‌ಫ್ರೀ ಸಲುಷನ್ಸ್ (ಪ್ರೈವೇಟ್) ಸಂಸ್ಥೆಯ ಮುಖ್ಯಸ್ಥರು. ಇವರು ಸಾಮಾಜಿಕ ಕಳಕಳಿಯುಳ್ಳ ಬೃಹತ್ ಯೋಜನೆಗಳ ನೇತೃತ್ವ ವಹಿಸುವುದರಲ್ಲಿ ಅಪಾರ ಅನುಭವವನ್ನು ಪಡೆದಿದ್ದಾರೆ. ಇವರು ನಿವೃತ್ತ ಐ.ಎ.ಎಸ್. ಅಧಿಕಾರಿ ಮತ್ತು ವಿಶ್ವಸಂಸ್ಥೆಯ ಸಲಹೆಗಾರರೂ ಆಗಿದ್ದರು. ಸಾವಿರಾರು ಬಡ ನಿರುದ್ಯೋಗಿ ಯುವಕರಿಗೆ ಉದ್ಯೋಗವನ್ನು ದೊಕಿಸಿಕೊಡುವ ಈ ಮಹಾನ್ ಯೋಜನೆಯನ್ನು ಅವರು ಕರ್ನಾಟಕದಲ್ಲಿ ಮೊಟ್ಟಮೊದಲ ಬಾರಿಗೆ, ಅದರಲ್ಲೂ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಆಶ್ರಯದಲ್ಲಿ ಆರಂಭಿಸಿದ್ದಾರೆ. ಆಶ್ರಮದ ವತಿಯಿಂದ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜಿ ಮತ್ತು ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರಾದ ಸ್ವಾಮಿ ಮಹೇಶಾತ್ಮಾನಂದಜಿ ಅವರು ಈ ಯೋಜನೆಯಲ್ಲಿ ಸಕ್ರಿಯ ಆಸಕ್ತಿ ವಹಿಸಿ, ಮಾರ್ಗದರ್ಶನ ನೀಡುತ್ತಿದ್ದಾರೆ. ಈ ರಾಷ್ಟ್ರದ ಚಿರಂತನ ನೇತಾರ ಸ್ವಾಮಿ ವಿವೇಕಾನಂದರ ಹೆಸರಿನಲ್ಲಿ ಆರಂಭವಾಗಿರುವ ಈ ಉದ್ಯೋಗ ಖಾತರಿ ಯೋಜನೆಯು ಯಶಸ್ವಿಯಾಗಲೆಂದು ಪ್ರಾರ್ಥಿಸುತ್ತೇವೆ. ಹೆಚ್ಚಿನ ವಿವರಗಳಿಗಾಗಿ ಈ ವೆಬ್‌ಸೈಟ್‌ಗೆ ಭೇಟಿ ನೀಡಬಹುದು: www.haselfreudyog.com.

Managing Editor : Swami Muktidananda    Editor : Swami Vireshananda

Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020